ದಿನೇಶ್ ಗುಡ್ಡದೂರು, ಆಲ್ದೂರು
*ಗಂಡಿಗೂ, ಗುಂಡಿಗೂ ಇರುವ ವ್ಯತ್ಯಾಸವೇನು ರಾಮ್?*



ಕಂಟ್ರೋಲ್ ಮಾಡುವ ಶಕ್ತಿಗಳು ಬೇರೆಬೇರೆ – ಗಂಡಿಗೆ ನೀರೆ; ಗುಂಡಿಗೆ ನೀರು.

ರತ್ನಜ, ಮೈಸೂರು
*ಸಾಮಾನ್ಯವಾಗಿ ಮಹಿಳೆಯರ ಉಡುಪುಗಳಿಗೆ ಜೇಬು ಇರುವುದಿಲ್ಲ; ಏಕೆ?*
ಗಂಡನೆಂಬ ಮೊಬೈಲ್ ಎಟಿಎಂ ಕಮ್ ಲಗೇಜ್ ಕ್ಯಾರಿಯರ್ ಹಿಂದೆಹಿಂದೆಯೇ ಬರುವಾಗ ಜೇಬು ಅನವಶ್ಯಕ.

ಮನೋರಮಾ ಪ್ರಭು, ಕಾಸರಕೋಡ
*ಕೊನೆಯಲ್ಲಿ ಎಲ್ಲವೂ ಒಳ್ಳೆಯದೇ ಆಗುತ್ತದೆ ಎನ್ನುತ್ತಾರೆ. ಏಕೆ?*
ನಿಜವೇ! ಕೊನೆಯಲ್ಲಿ ಬಡಿಸುವ ವೈಕುಂಠ ಸಮಾರಾಧನೆಯ ಊಟ ಒಳ್ಳೆಯದೇ ಆಗಿರುತ್ತದಲ್ಲ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಪಾಕಶಾಲೆಗೂ, ಪಾಠಶಾಲೆಗೂ ಇರುವ ವ್ಯತ್ಯಾಸ?*




ಪಾಕಶಾಲೆಯಲ್ಲಿ ನಾಲಿಗೆಗೆ ಬಂದದ್ದು ಕೆಳಕ್ಕೆ ಪಯಣ; ಪಾಠಶಾಲೆಯಲ್ಲಿ ನಾಲಿಗೆಗೆ ಬಂದದ್ದು ಮೇಲಕ್ಕೆ ಪಯಣ!

ಕುಮಾರ ಚಲವಾದಿ, ಹೊಳೆನರಸಿಪುರ
*ಇತ್ತೀಚೆಗೆ ಬಿಡುಗಡೆ ಆಗುತ್ತಿರುವ ಸಿನಿಮಾಗಳ ಬಗ್ಗೆ ನಿಮ್ಮ ಅಭಿಪ್ರಾಯ?*
ಇತ್ತೀಚೆಗೆ ಬಿಡುಗಡೆಯಾದ ಉಗ್ರರೇ ಇವಕ್ಕಿಂತ ಸೌಮ್ಯ.

ಪಿ. ಗೋವಿಂದರಾಜ್, ಶಿವಮೊಗ್ಗ
*ಪ್ರಶ್ನೆಪತ್ರಿಕೆಗೂ, ಲಗ್ನಪತ್ರಿಕೆಗೂ ಇರುವ ವ್ಯತ್ಯಾಸವೇನು?*
ಪ್ರಶ್ನೆಪತ್ರಿಕೆ ಮೂರು ಗಂಟೆಯ ಕಾಲ; ಲಗ್ನಪತ್ರಿಕೆ ಮೂರು ಗಂಟಿನ ಕೋಳ.

ರಮೇಶ. ಜ. ಬೊಂಗಾಳೆ, ಬೈಲಹೊಂಗಲ
*ಪ್ರತಿಸಲವೂ ತಪ್ಪು ಮಾಡುವವರಿಗೆ ಏನು ಶಿಕ್ಷೆ ಕೊಡಬೇಕು ಸಾರ್?*
ಶಿಕ್ಷೆಯೇಕೆ? ಟಿವಿಯಲ್ಲಿ ಸ್ಕ್ರಾಲ್ ಬರೆಯುವ ಉದ್ಯೋಗ ಕೊಡಿ. ಅಲ್ಲಿ ತಪ್ಪು ಮಾಡುವವರಿಗೇ ಆದ್ಯತೆ.

ಸೃಜನ ಜೈನ್, ಹೂವಿನಹಡಗಲಿ
*ನದಿಗೆ ಅಡ್ಡಲಾಗಿ ಏಕೆ ಅಣೆಕಟ್ಟು ಕಟ್ಟುತ್ತಾರೆ ಸಾರ್?*
ಅಡ್ಡದಾರಿ ಹಿಡಿದರೆ ಬೇಗ ಮತ್ತು ಹೆಚ್ಚು ಲಾಭ ಸಿಗುತ್ತದಂತೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ
*ಅಂಬೆಯ ಮನವಿಯನ್ನು ಪುರಸ್ಕರಿಸಿ ಭೀಷ್ಮ ಆಕೆಯನ್ನು ವಿವಾಹವಾಗಿದ್ದಿದ್ದರೆ...?*
ಭೀಷ್ಮ ಹೀರೋ, ಅಂಬೆ ಹೀರೋಯಿನ್ ಆಗಿ ನಟಿಸಿದ 'ಮಾತು ತಪ್ಪಿದ ಮಗ' ಚಿತ್ರ ಆಗಲೇ ಸೆಟ್ಟೇರುತ್ತಿತ್ತು.

ಹೇಕಮಂ. ಮಧ್ಯಸ್ಥ, ಫಲ್ಗುಣಿ
*ಪ್ರಶ್ನೆಯಲ್ಲಿಯೇ ಉತ್ತರವಿರುವ ಪ್ರಶ್ನೆ ಯಾವುದು?*
ಇದೇ! ಎರಡನೆಯ ಪದದಲ್ಲೇ ಉತ್ತರ ಇದೆಯಲ್ಲ!

ಪಿ.ಜೆ. ರಾಘವೇಂದ್ರ, ಮೈಸೂರು
*ದೇವಾನುದೇವತೆಗಳಿಗೆ ಹೆಚ್ಚುವರಿ ತಲೆ, ಕೈಗಳು ಇರುತ್ತವೆ. ಹೆಚ್ಚುವರಿ ಕಾಲುಗಳು ಏಕೆ ಇರುವುದಿಲ್ಲ?*
ಭಸ್ಮಾಸುರನಂತಹವರು ಅಟ್ಟಿಸಿಕೊಂಡುಬಂದಾಗ ಕಾಲಿಗೆ ಕಾಲೇ ತೊಡರುಗಾಲಾಗದಿರಲೆಂದು.

ವೈ.ಎನ್. ಸುಂದರೇಶನ್, ಮೈಸೂರು
*ನಿರಾಭರಣ ಸುಂದರಿ ಎಂದರೆ ಯಾರು?*
ಸರಗಳ್ಳನಿಗೆ ನಿಜಕ್ಕೂ ಹೆದರಿ ಆಭರಣಗಳನ್ನು ಎತ್ತಿಟ್ಟು ವಾಕಿಂಗ್ ಬರುವವಳು.

ಸಂತೆಬೆನ್ನೂರು ಫೈಜ್ನಟ್ರಾಜ್, ದಾವಣಗೆರೆ
*ಹೆಂಡತಿಗೆ ಗಂಡ ಹೆದರಲೇಬೇಕಾ ಸಾರ್?*
ಹಾಗೇನಿಲ್ಲ. ಬೆಚ್ಚಿಬಿದ್ದರೂ ಆದೀತು.

## ಬಹುಮಾನಿತ ಪ್ರಶ್ನೆ

ಎಂ. ಮೃತ್ಯುಂಜಯ, ಚಿತ್ರದುರ್ಗ
*ರಾಗಿ ತಿಂದರೆ ಫಿಗರ್; ಅನ್ನ ತಿಂದರೆ ಶುಗರ್; ಲಂಚ ತಿಂದರೆ?*
ಅನ್ನ ತಿನ್ನುವ ಜಾಗದಿಂದ ರಾಗಿ(ಮುದ್ದೆ) ತಿನ್ನುವ ಜಾಗಕ್ಕೆ ಟ್ರಾನ್ಸ್‌ಫರ್!

ಎಸ್.ಜಿ. ಕರನಂದಿ, ಹುನಗುಂದ
*ಹೊರನೋಟದಲ್ಲಿ ಬಹಳ ಸಾಧುಗಳಂತೆ ಕಂಡು, ಜನರನ್ನು ವಂಚಿಸುವವರಿಗೆ ಸೂಕ್ತ ಬಿರುದೇನು ಮಾನ್ಯರೆ?*
ಗುಲಗಂಜಿ.

ರಮೇಶ ಜ. ಬೊಂಗಾಳೆ, ಬೆಳಗಾವಿ
*ಅನ್ನದೇವರ ಮುಂದೆ ಇನ್ನು ದೇವರು ಉಂಟೇ ಸಾರ್?*
ಇವೆಯಲ್ಲಾ... ಪಿಜ್ಜಾ ಪರಮಾತ್ಮ, ಬರ್ಗರ್ ಭಗವಾನ್, ಮಂಚೂರಿ ಮಹದೇವ, ನೂಡಲ್ಸ್ ನಾರಾಯಣ.....

ದೇವೇಂದ್ರ, ಕಡೂರು
*ನೀರಿಲ್ಲದೆ ಬದುಕುವ ಸಾಮರ್ಥ್ಯ ಮನುಷ್ಯನಿಗೆ ಇದ್ದಿದ್ದರೆ?*



ನದಿಗಳೆಲ್ಲ ಡಿನೋಟಿಫೈ ಆಗಿ ಲೇಔಟ್‌ಗಳಾಗುತ್ತಿದ್ದವು.

ಕುಬೇರಪ್ಪ ವಿಭೂತಿ, ಹರಿಹರ
*ನಮ್ಮೂರಲ್ಲಿ ಕಳ್ಳರೇ ನಾಯಿಗಳನ್ನು ಹಿಡಿದುಕೊಂಡು ವಾಕಿಂಗ್ ಹೋಗುವರಲ್ಲಾ...?*
ಅವು ಸ್ಪೆಷಲ್ ನಾಯಿಗಳು; ಮಫ್ತಿಯಲ್ಲಿದ್ದರೂ ಪೊಲೀಸರ ವಾಸನೆ ಕಂಡುಹಿಡಿದು ಬೊಗಳುತ್ತವೆ; ಇವರು ತಪ್ಪಿಸಿಕೊಳ್ಳುತ್ತಾರೆ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಊರಿಗೆ ಬಂದವನು ಬಾರಿಗೆ ಬರದೆ ಇರ್ತಾನೆಯೇ?*
ಬರುವ ಅಗತ್ಯವೇ ಇಲ್ಲ; ಫ್ಲಿಪ್‌ಕಾರ್ಟ್‌ನಲ್ಲಿ ಕ್ರೇಟ್ ಆರ್ಡರಿಸಿದರೆ ಕುಂತಲ್ಲೇ ಗುಂಡು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಹೆಂಡತಿಗೂ, ಹಣಕ್ಕೂ ಏನು ವ್ಯತ್ಯಾಸ?*
ಹೆಂಡತಿ ಬೆಳ್ಳಗಿರಬೇಕೆಂದು ಬಯಸುತ್ತಾರೆ; ಹಣ ಕಪ್ಪಾದರೂ ಪರವಾಗಿಲ್ಲ.

■ ರಾಮ್